ಅಕ್ಟೋಬರ್ 2024



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

# ಅದಮ್ಯ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ

## ದೀಪದಿಂದ ದೀಪ ಹಚ್ಚುವ ಸಡಗರದ ಹಬ್ಬ



ಹಿಂದೂ ಪುರಾಣಗಳ ಪ್ರಕಾರ, ಹಿಂದೆ ನರಕಾಸುರನೆಂಬ ಕ್ರೂರ ರಾಕ್ಷಸ ಇದ್ದ. ಆತ ದರೋಡೆಕೋರನಾಗಿದ್ದ. ವರುಣ ದೇವನ ಛತ್ರಿಯನ್ನೂ ಅದಿತಿಯ ಕಿವಿಯ ಓಲೆಗಳನ್ನೂ ಕದ್ದಿದ್ದ. ಅಷ್ಟೇ ಅಲ್ಲ, ಸಾವಿರಾರು ಹೆಣ್ಣುಮಕ್ಕಳನ್ನು ಕದ್ದೊಯ್ದು ಸೆರೆಯಲ್ಲಿಟ್ಟಿದ್ದ. ಶ್ರೀಕೃಷ್ಣ ಅವನನ್ನು ಯುದ್ಧದಲ್ಲಿ ಸೋಲಿಸಿ ಆ ಕನ್ಯೆಯರನ್ನೆಲ್ಲ ಬಿಡಿಸಿ ತಂದ. ಆ ಯುವತಿಯರೆಲ್ಲರೂ ಕೃಷ್ಣನನ್ನೇ ಪತಿಯೆಂದು ಸ್ವೀಕರಿಸಿದರು. ನರಕಾಸುರನ ಮೇಲಿನ ವಿಜಯದ ಸಂಕೇತವಾಗಿ ನಾವು ನರಕ ಚತುರ್ದಶಿಯ ರಾತ್ರಿ ದೀಪವನ್ನು ಬೆಳಗಿಸುತ್ತೇವೆ.

ದೀಪಾವಳಿ ಎಂದರೆ ದೀಪದ ಹಬ್ಬ. ಮಣ್ಣಿನ ಹಣತೆ, ಬೀಜದ ಎಣ್ಣೆ, ಹತ್ತಿಯ ಬತ್ತಿ. ಹೊಸ ಬಟ್ಟೆ; ಜೊತೆಗೆ ರಂಗೋಲಿ, ತೋರಣ, ಧೂಪದ ಪರಿಮಳ, ಸಿಹಿ ಕಜ್ಜಾಯ ಇವು ನಮ್ಮ ಭಾರತೀಯ ದೀಪಾವಳಿಯ ಸಡಗರದ ಸಂಪ್ರದಾಯಗಳು. ಆದರೆ ಈಚಿನ ದಿನಗಳಲ್ಲಿ ಇವೆಲ್ಲವನ್ನೂ ಮೀರಿ, ಢಾಂಢೂಮ್ ಪಟಾಕಿಗಳ ಸದ್ದು, ರಾಕೆಟ್ ಉಡಾವಣೆ ಇವೇ ಮುಖ್ಯ ಆಗುತ್ತಿವೆ. ಮನೆಯಲ್ಲಿ ಪ್ಲಾಸ್ಟಿಕ್ ಅಲಂಕಾರಿಕ ಸಾಮಗ್ರಿಗಳು. ರಾತ್ರಿಯೆಲ್ಲ ಬೆಂಕಿ ಕಿಡಿಗಳ ಸಿಡಿತ, ಹೊಗೆ, ಗದ್ದಲ ಗಲಾಟೆಯಿಂದಾಗಿ ಪ್ರಾಣಿಪಕ್ಷಿಗಳು ತುಂಬ ಸಂಕಷ್ಟ ಅನುಭವಿಸುತ್ತವೆ. ಪಟಾಕಿ ಸುಡಲು ಹೋಗಿ ಕೈಕಾಲು ಸುಟ್ಟುಕೊಂಡ, ಅಥವಾ ಕಣ್ಣುಗಳನ್ನೇ ಕಳೆದುಕೊಂಡ ಮಕ್ಕಳು ದೀಪಾವಳಿಯ ದಿನಗಳಲ್ಲಿ ಆಸ್ಪತ್ರೆಗಳಿಗೆ ದಾಖಲಾಗುತ್ತಾರೆ. ಈ ಬಗೆಯ ನರಕವನ್ನು ಸೃಷ್ಟಿಸುವ ಬದಲು ಚಂದದ ರಂಗೋಲಿ, ಹಣತೆಯ ತಂಪುದೀಪಗಳಿಂದ ಈ ಹಬ್ಬವನ್ನು ಆಚರಿಸೋಣವೆ?

## ಮನೆಯ ಅಡುಗೆಯಲ್ಲಿ ಸಿರಿಧಾನ್ಯಗಳು

ಅಕ್ಟೊಬರ್ 16 ಅಂದರೆ 'ವಿಶ್ವ ಆಹಾರ ದಿನ'. ನಾವೆಲ್ಲ ಅಕ್ಕಿ, ಗೋಧಿಯನ್ನು ಹೆಚ್ಚಾಗಿ ಆಹಾರದಲ್ಲಿ ಬಳಸುತ್ತೇವೆ. ಆರೋಗ್ಯದ ದೃಷ್ಟಿಯಿಂದ ಅವೆರಡಕ್ಕಿಂತ 'ಸಿರಿಧಾನ್ಯಗಳು' ನಮಗೆಲ್ಲ ಒಳ್ಳೆಯದು ಎಂದು ವಿಜ್ಞಾನಿಗಳು ಹೇಳುತ್ತಾರೆ. ರಾಗಿ, ನವಣೆ, ಜೋಳ, ಸೆಜ್ಜೆ, ಸಾಮೆ, ಬರಗು, ಆರಕ, ಕೊರಲು ಇವಕ್ಕೆ ಸಿರಿಧಾನ್ಯ (ಇಂಗ್ಲಿಷ್‌ನಲ್ಲಿ 'ಮಿಲ್ಲೆಟ್ಸ್') ಎನ್ನುತ್ತಾರೆ. ಇವುಗಳನ್ನು ಬೆಳೆಯಲು ಜಾಸ್ತಿ ನೀರು ಬೇಕಾಗಿಲ್ಲ. ರಸಗೊಬ್ಬರವನ್ನೂ ಸುರಿಯಬೇಕಿಲ್ಲ. ಇವಕ್ಕೆ ಕೀಟಬಾಧೆ ಅಷ್ಟಾಗಿ ಇಲ್ಲದ್ದರಿಂದ ಪೀಡೆನಿವಾರಕ ವಿಷದ್ರವ್ಯಗಳನ್ನೂ ಸಿಂಪಡಿಸಬೇಕಾಗಿಲ್ಲ. ಹಾಗಾಗಿ ಇದು ಭೂಮಿಗೂ ಒಳ್ಳೆಯದು, ರೈತನಿಗೂ ಒಳ್ಳೆಯದು. ಎಲ್ಲಕ್ಕಿಂತ ಮುಖ್ಯವೆಂದರೆ ಆಹಾರ ಸೇವಿಸುವ ನಮಗೆಲ್ಲರಿಗೂ ಒಳ್ಳೆಯದು.

ನಿಮಗಿದು ಗೊತ್ತೆ? ಕಳೆದ ವರ್ಷ, 2023ನ್ನು 'ಜಾಗತಿಕ ಸಿರಿಧಾನ್ಯ ವರ್ಷ' ಎಂದು ವಿಶ್ವಸಂಸ್ಥೆ ಘೋಷಣೆ ಮಾಡಲು ಕರ್ನಾಟಕದ ಒತ್ತಾಯವೇ ಕಾರಣವಾಗಿತ್ತು. ನಮ್ಮ ದೇಶದ ಇತರ ರಾಜ್ಯಗಳಿಗೂ ಅದನ್ನು ಪರಿಚಯಿಸಬೇಕೆಂದು ಪ್ರಧಾನಿ ಮೋದಿಯವರು ಸಂಸತ್ ಭವನದ ಕ್ಯಾಂಟೀನಿನಲ್ಲಿ ಸಿರಿಧಾನ್ಯಗಳಿಂದ ತಯಾರಿಸಿದ ತಿಂಡಿ ಊಟಗಳೂ ಸಿಗುವಂತೆ ವ್ಯವಸ್ಥೆ



ಮಾಡಿದ್ದರು. ಕರ್ನಾಟಕದ್ದೇ ಅಡುಗೆಯವರು ಅಲ್ಲಿಗೆ ಹೋಗಿ ಸಿರಿಧಾನ್ಯಗಳ ಭಕ್ಷಭೋಜ್ಯಗಳನ್ನು ತಯಾರಿಸಿದ್ದರು.

ನವಣೆ, ರಾಗಿ, ಸಾಮೆಯಂಥ ಕಾಳುಗಳಿಂದ ಅನ್ನ, ಉಪ್ಪಿಟ್ಟು, ಸಿಹಿತಿಂಡಿ ಮಾಡಲು ಅಮ್ಮನಿಗೆ ನೀವು ಒತ್ತಾಯಿಸಬೇಕು.

## ಕನ್ನಡ ಅಕ್ಷರಗಳು ಸುಂದರ, ಸುಮಧುರ

ಬರಲಿರುವ ನವಂಬರ್ ತಿಂಗಳಿಡೀ ನಾವು ಕನ್ನಡವನ್ನು ಹಾಡಿ ಹೊಗಳುತ್ತೇವೆ. ಈ ಚಿತ್ರದಲ್ಲಿ ಕಾಣುವ ಕನ್ನಡ ಅಕ್ಷರಗಳನ್ನು ನೋಡಿದರೆ ನಮ್ಮ ಲಿಪಿ ಅದೆಷ್ಟು ಚಂದ ಎಂಬುದು ಗೊತ್ತಾಗುತ್ತದೆ. ಲಿಪಿ ಚಂದ ಅಷ್ಟೇ ಅಲ್ಲ, ಅದರಲ್ಲಿ ಮೂಡಿದ ಮಾತು ಕೂಡ ಚಂದ. ಅದರಲ್ಲಿ 'ಸೋಹಂ' (ನಾನು ದೇವರಂತಾಗುತ್ತೇನೆ) ಎಂದೆನಿಸದೆ 'ದಾಸೋಹಂ' (ಹಸಿದವನಿಗೆ



ಊಟ ನೀಡೋಣ) ಎಂದೆನಿಸಯ್ಯ ಎಂಬ ಮಾತು ಇದೆ, ಗಮನಿಸಿ. ದೇವರಾಗುವುದು ಎಂದರೆ ಕಲ್ಲಾಗಿ ನಿಲ್ಲುವುದು ಎಂಬ ಅರ್ಥ ದಲ್ಲಿ ಬಸವಣ್ಣನವರು ಈ ಮಾತನ್ನು ಹೇಳಿದ್ದಾರೆ. ನಾವು ಕಲ್ಲಾಗಬಾರದು; ಸಾಧ್ಯವಾದಷ್ಟೂ ಬೇರೆಯವರಿಗೆ ನೆರವಾಗುವ ಕಡೆ ಲಕ್ಷ್ಯ ವಹಿಸಬೇಕು ಎಂಬುದು ಈ ಮಾತಿನ ಅರ್ಥ. ಈ ಕಲಾತ್ಮಕ ಚಿತ್ರವನ್ನು ಹೊಸನಗರದ ಬಳಿ ಮೂಲೆಗದ್ದೆ ಎಂಬ ಊರಲ್ಲಿರುವ ಬಸವಮಠದಲ್ಲಿ ಬರೆಯಲಾಗಿದೆ.

ಕನ್ನಡವನ್ನು ಸೊಟ್ಟಪಟ್ಟ ಬರೆಯುವ ಬದಲು ಆದಷ್ಟೂ ಚಂದವಾಗಿ ಬರೆಯಬೇಕು ಎಂಬ ಬಯಕೆ ನಮಗೆಲ್ಲರಿಗೆ ಇರಬೇಕು. ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿದರೆ ಅದೇನೂ ಅಸಾಧ್ಯವಲ್ಲ.



## ಅಕ್ಟೊಬರ್ 15 ಬಿಳಿಕೋಲಿನ ದಿನ

ಪ್ರತಿವರ್ಷ ಅಕ್ಟೊಬರ್ 15ನ್ನು 'ಅಂತರರಾಷ್ಟ್ರೀಯ ಬಿಳಿ ಕೋಲಿನ ದಿನ' ಎಂದು ಆಚರಿಸುತ್ತಾರೆ. ಕಣ್ಣಿನ ದೃಷ್ಟಿ ಕಳೆದುಕೊಂಡವರು (ಕೆಂಪು ತುದಿಯ) ಬಿಳಿ ಬಣ್ಣದ ಕೋಲನ್ನು ಹಿಡಿದು ಮೆಲ್ಲಗೆ ಸಂಚರಿಸುವುದನ್ನು ನೀವು ನಗರಗಳಲ್ಲಿ ನೋಡಿರಬಹುದು. ಅವರ ಸುರಕ್ಷತೆಯ ಬಗ್ಗೆ ನಾವು ವಿಶೇಷ ಕಾಳಜಿ ವಹಿಸಬೇಕು; ಸಹಾಯ ಮಾಡಬೇಕು. ಅವರು ಸಾಧ್ಯವಾದಷ್ಟೂ ಸ್ವತಂತ್ರವಾಗಿ ಓಡಾಡುವಂತೆ, ಅವರ ಅಭಿಮಾನಕ್ಕೆ ಭಂಗ ತಾರದಂತೆ ನೆರವು ನೀಡಬೇಕು. ಅವರ ಹಕ್ಕುಗಳನ್ನು ಗೌರವಿಸಬೇಕು. ಕೇವಲ ಇದೊಂದೇ ದಿನ ಅಲ್ಲ; ವರ್ಷವಿಡೀ ನಮಗೆ ಇದು ನೆನಪಿರಬೇಕು.

ನಿಮಗೆ ಈ ಕತೆ ಗೊತ್ತಿದೆಯೆ? ದೃಷ್ಟಿ ಇಲ್ಲದ ಮನುಷ್ಯನೊಬ್ಬ ರಾತ್ರಿಯ ವೇಳೆ ಲಾಟೀನು ಹಿಡಿದು ಹೋಗುತ್ತಿದ್ದ. ಯಾರೋ ಆತನನ್ನು ಕೇಳಿದರು: "ಅಯ್ಯಾ, ನಿನಗೆ ಏನೂ ಕಾಣಿಸುವುದಿಲ್ಲ. ಆದರೂ ದೀಪ ಯಾಕೆ ಹಿಡಿದು ನಡೆಯುತ್ತೀಯಾ?" ಅಂತ. ಅದಕ್ಕೆ ಆತ ಹೇಳಿದ: "ಈ ಲಾಟೀನು ನನಗೆ ಅಲ್ಲ ಮಗೂ! ನಿಮ್ಮಂತೆ ಕಣ್ಣಿದ್ದವರಿಗೆ ಕತ್ತಲಲ್ಲಿ ಓಡಾಡಿ ಅಭ್ಯಾಸ ಇರುವುದಿಲ್ಲ. ನೀವು ನನಗೆ ಡಿಕ್ಕಿ ಹೊಡೆಯಬಾರದು ಅದಕ್ಕೇ ಈ ದೀಪ ಹಿಡಿದಿದ್ದೇನೆ" ಎಂದ. ಕಣ್ಣಿದ್ದ ನಾವು ತಪ್ಪು ಮಾಡದಂತೆ ಆತ ವಹಿಸಿದ ಕಾಳಜಿ ನಮ್ಮ ಕಣ್ತೆರೆಸಬೇಕು!

ಈ ಸಂದರ್ಭದಲ್ಲಿ ಎರಡು ಪ್ರಶ್ನೆಗಳಿಗೆ ನೀವು ಉತ್ತರ ಕಂಡುಕೊಳ್ಳಬೇಕು. 1. ಬ್ರೇಲ್ ಲಿಪಿ ಎಂದರೇನು ಗೊತ್ತೆ? ಆ ಹೆಸರು ಯಾಕೆ ಬಂತು? ಪ್ರಶ್ನೆ 2: ಹೆಲೆನ್ ಕೆಲ್ಲರ್ ಎಂಬ ಮಹಿಳೆ ಯಾರು? ಅವರಿಗೆ ಯಾತಕ್ಕಾಗಿ ಜಾಗತಿಕ ಪ್ರಸಿದ್ಧಿ ಬಂತು?

## ಆತ್ಮನಿರ್ಭರ ಭಾರತದ ರತ್ನಕಳಶ ರತನ್ ಟಾಟಾ



ದೇಶದ ಖ್ಯಾತ ಉದ್ಯಮಪತಿ ರತನ್ ಟಾಟಾ (86) ಇದೇ ಅಕ್ಟೊಬರ್ 9ರಂದು ನಿಧನರಾದರು. ದೇಶದ ನಾನಾ ಭಾಗಗಳಲ್ಲಿ ಸಂತಾಪದ ಹೊಳೆ ಹರಿಯಿತು. ಉದ್ಯಮಿಗಳ ನಿಧನಕ್ಕೆ ಜನಸಾಮಾನ್ಯರು ಸಂತಾಪ ಸೂಚಿಸುವುದು ಕಮ್ಮಿ. ಆದರೆ ರತನ್ ಟಾಟಾ ತುಂಬ ಜನಪ್ರಿಯರಾಗಿದ್ದರು. 1868ರಲ್ಲಿ ಜಮ್‌ಶೇಟ್ಜೀ ಟಾಟಾ ಉಕ್ಕಿನ ಕಾರ್ಖಾನೆ ಆರಂಭಿಸಿದಾಗಿನಿಂದ ಸ್ವಾತಂತ್ರ್ಯ ಚಳವಳಿಗೆ, ಭಾರತದ ಪ್ರಗತಿಗೆ ಟಾಟಾ ಕಂಪನಿ ಅಪಾರ ಕೊಡುಗೆ ನೀಡಿದೆ. ಇಂದು ಟಾಟಾ ಟ್ರಕ್‌ನಿಂದ ಹಿಡಿದು ಕೈಗಡಿಯಾರ (ಟೈಟಾನ್), ಚಹಾ (ಟೆಟ್ಲೆ), ಫ್ರಿಜ್ (ವೋಲ್ಟಾಸ್), ಟಿವಿ (ಟಾಟಾ ಸ್ಕೈ), ಹೊಟೆಲ್ (ತಾಜ್), ನ್ಯಾನೊ ಕಾರು, ವಿಮಾನ (ಏರ್ ಇಂಡಿಯಾ/ವಿಸ್ತಾರಾ)ದಿಂದ ಹಿಡಿದು ದಿನಸಿ (ಬಿಗ್ ಬಾಸ್ಕೆಟ್)ವರೆಗೂ ಈ ಕಂಪನಿ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಜಗತ್ತಿಗೆಲ್ಲ ವಿಸ್ತರಿಸಿದೆ. ಕಳೆದ 33 ವರ್ಷಗಳಿಂದ ರತನ್ ಟಾಟಾ ಅವರೇ ಟಾಟಾ ಕಂಪನಿಯನ್ನು ನಡೆಸುತ್ತಿದ್ದರು. ಉದ್ಯಮಕ್ಕೆ ಕೊಡುವಷ್ಟೇ ಗಮನವನ್ನು ಅವರು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಜನಕಲ್ಯಾಣಕ್ಕೆ ಧಾರಾಳ ಕೊಡುಗೆ ನೀಡುತ್ತಿದ್ದರು. ವಿದೇಶೀ ವಿದ್ಯಾಸಂಸ್ಥೆಗಳಿಗೂ ದಾನ ನೀಡುತ್ತಿದ್ದರು. 'ಆತ್ಮನಿರ್ಭರ ಭಾರತ'ವನ್ನು ಕಟ್ಟುವುದು ಹೇಗೆ ಎಂಬುದಕ್ಕೆ ರತನ್ ಟಾಟಾ ಉದ್ಯಮ ಸಮೂಹ ಒಂದು ಮಾದರಿಯಂತಿದೆ. ಅದಕ್ಕೆ 'ರತ್ನಕಳಶ' ಎಂಬಂತಿದ್ದರು ರತನ್ ಟಾಟಾ.

## ನೊಬೆಲ್ ವಿಜ್ಞಾನಿ ಸುಬ್ರಹ್ಮಣ್ಯನ್ ಚಂದ್ರಶೇಖರ್



ಪ್ರತಿವರ್ಷ ಅಕ್ಟೊಬರ್ ಎರಡನೇ ವಾರದಲ್ಲಿ ನೊಬೆಲ್ ವಿಜೇತರ ಹೆಸರುಗಳ ಘೋಷಣೆಯಾಗುತ್ತದೆ. ಫಿಸಿಕ್ಸ್ (ಭೌತವಿಜ್ಞಾನ), ಕೆಮಿಸ್ಟ್ರಿ (ರಸಾಯನ ವಿಜ್ಞಾನ), ಮೆಡಿಸಿನ್ (ವೈದ್ಯಕೀಯ) ಸಾಹಿತ್ಯ, ಅರ್ಥಶಾಸ್ತ್ರ ಮತ್ತು ಶಾಂತಿ ಹೀಗೆ ಐದು ವಿಭಾಗಗಳಲ್ಲಿ ಪುರಸ್ಕಾರಗಳಿಗೆ ಭಾಜನರಾದವರ ಹೆಸರುಗಳು ಆಗ ಲಕಲಕಿಸುತ್ತವೆ. ಅಕ್ಟೊಬರ್ ತಿಂಗಳಲ್ಲೇ ಜನಿಸಿದ ಭಾರತೀಯ ಮೂಲದ ನೊಬೆಲ್ ವಿಜ್ಞಾನಿಯ ಹೆಸರು ಗೊತ್ತಿದೆಯೆ? ಅವರು ಅಮೆರಿಕದಲ್ಲಿ ನೆಲೆಸಿದ್ದ ಡಾ. ಸುಬ್ರಹ್ಮಣ್ಯನ್ ಚಂದ್ರಶೇಖರ್. ಅವರು ನಮ್ಮ ದೇಶದ ಏಕೈಕ ನೊಬೆಲ್ ವಿಜ್ಞಾನಿ ಸರ್ ಸಿ.ವಿ.ರಾಮನ್ ಅವರ ಅಣ್ಣನ ಮಗ.

1910ರ ಅಕ್ಟೊಬರ್ 19ರಂದು ಲಾಹೋರ್‌ನಲ್ಲಿ ರೇಲ್ವೆ ಅಧಿಕಾರಿಯಾಗಿದ್ದ ಸಿ.ಎಸ್. ಅಯ್ಯರ್ ಮತ್ತು ಸೀತಾ ದಂಪತಿಯ ಮಗನಾಗಿ ಜನಿಸಿದ ಚಂದ್ರಶೇಖರ್ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು 1930ರಲ್ಲಿ ಬ್ರಿಟನ್ನಿನ ಹಡಗು ಏರಿದರು. ಚಿಕ್ಕಪ್ಪ ಹಡಗಿನ ಯಾತ್ರೆಯಲ್ಲೇ ನೀರಿನಲ್ಲಿ ಬೆಳಕಿನ ಚದುರಾಟವನ್ನು ಅಧ್ಯಯನ ಮಾಡಿ ನೊಬೆಲ್ ಪಡೆದ ಹಾಗೇ ಚಂದ್ರಶೇಖರ್ ಕೂಡ ನಕ್ಷತ್ರಗಳ ಕುಸಿತದ ಕುರಿತು ಹಡಗಿನಲ್ಲೇ ಗಣಿತ ಲೆಕ್ಕಾಚಾರ ಮಾಡಿದರು. ಯಾವ ನಕ್ಷತ್ರವಾದರೂ ಸೂರ್ಯನಿಗಿಂತ 1.4 ಪಟ್ಟು ದೊಡ್ಡದಿದ್ದರೆ ಮಾತ್ರ ಅದು ತನ್ನ ಮೇಲೇ ಕುಸಿದು ಶ್ವೇತಕುಬ್ಜ ಆಗುತ್ತದೆ ಎಂದು ಅವರು ಪ್ರತಿಪಾದಿಸಿದರು. ಅದು "ಚಂದ್ರಾ ಮಿತಿ" ಎಂತಲೇ ಜಗದ್ವಿಖ್ಯಾತ ಆಗಿದೆ. ತಾರೆಗಳ ಕುರಿತ ಅವರ ಗಣಿತೀಯ ಸಂಶೋಧನೆಗಳಿಗೆ ಎಲ್ಲೆಡೆ ಮಾನ್ಯತೆ ಮತ್ತು ಪ್ರಶಂಸೆ ಲಭಿಸುತ್ತಲೇ ಹೋಯಿತು. 1968ರಲ್ಲಿ ಭಾರತ ಅವರಿಗೆ 'ಪದ್ಮವಿಭೂಷಣ' ಪ್ರಶಸ್ತಿ ನೀಡಿತು. ಅಮೆರಿಕದ ಪೌರತ್ವ ಪಡೆದ ಅವರಿಗೆ 1983ರಲ್ಲಿ ನೊಬೆಲ್ ಪಾರಿತೋಷಕವನ್ನು ಘೋಷಿಸಲಾಯಿತು. ಅಮೆರಿಕ ಅವರ ಹೆಸರಿನಲ್ಲೇ "ಚಂದ್ರಾ ಬಾಹ್ಯಾಕಾಶ ದೂರದರ್ಶಕ"ವನ್ನು ಹಾರಿ ಬಿಟ್ಟಿದೆ. 1995ರಲ್ಲಿ ಅವರು ನಿಧನರಾದರು. ಆದರೆ ಆ ದೂರದರ್ಶಕ ಇಂದಿಗೂ ಕಕ್ಷೆಯಲ್ಲಿ ಸುತ್ತುತ್ತಲೇ ಇದೆ.

### ಸುಭಾಷಿತ

एकेन शुष्कवृक्षेण दह्यमानेन वह्निना ।
दह्यते तद्वनं सर्वम् दुष्पुत्रेण कुलं तथा ॥

ಏಕೇನ ಶುಷ್ಕವೃಕ್ಷೇಣ ದಹ್ಯಮಾನೇನ ವಹ್ನಿನಾ ।
ದಹ್ಯತೇ ತದ್ವನಂ ಸರ್ವಂ ದುಷ್ಪುತ್ರೇಣ ಕುಲಂ ತಥಾ॥

ಒಂದು ಒಣಮರದಿಂದ ಹೊಮ್ಮಿದ ಬೆಂಕಿ ಇಡೀ ಕಾಡನ್ನು ಸುಡಬಲ್ಲದು. ಕುಲದಲ್ಲಿ ಒಬ್ಬ ದುಷ್ಟಪುತ್ರ ಇದ್ದರೆ ಇಡೀ ಕುಟುಂಬವೇ ನಾಶವಾಗಬಹುದು.

## ಪಕ್ಷಿಗಳಿಗೆ ಏಕೆ ಖಾರ ತಟ್ಟುವುದಿಲ್ಲ?



ಮೆಣಸಿನ ಕಾಯಿಗಳ ಖಾರ ಎಷ್ಟು ಉಗ್ರ ಎಂಬುದನ್ನು ಅಳೆಯಲು ಒಂದು ಮಾಪನ ಇದೆ. ಅದಕ್ಕೆ 'ಸ್ಕೋವಿಲ್ ಖಾರ ಸೂಚ್ಯಂಕ' ಎನ್ನುತ್ತಾರೆ. ತುಸುವೂ ಖಾರ ಇಲ್ಲದ (ಬೋಂಡಾ, ಬಜ್ಜಿಗಳಲ್ಲಿ ಸೇರಿಸುವ) ಮೆಣಸಿನ ಕಾಯಿಯದು ಹೀಟ್ ಇಂಡೆಕ್ಸ್ ಅಂದರೆ 'ಖಾರ ಸೂಚ್ಯಂಕ' 1 ಅಥವಾ 2 ಇರುತ್ತದೆ. ಮಧ್ಯಮ ಖಾರ ಇದ್ದರೆ ಅದರ ಸೂಚ್ಯಂಕ 5 ಇರುತ್ತದೆ. ಪುಟ್ಟ ಗಾತ್ರದ ಸೂಜಿ ಮೆಣಸಿನ ಖಾರ 6 ಅಥವಾ 7 ಇರುತ್ತದೆ. ಅಸ್ಸಾಂ, ಮೇಘಾಲಯಗಳಲ್ಲಿ ಬೆಳೆಯುವ 'ಭೂತ್ ಝುಲೋಕಿಯಾ' ಹೆಸರಿನ ಮೆಣಸು ಭಾರೀ ಉಗ್ರವಾಗಿದ್ದು ಅದರ ಖಾರ ಸೂಚ್ಯಂಕ 10. ಅದನ್ನು ಕೈಯಲ್ಲಿ ಮುಟ್ಟುವುದೂ ಅಪಾಯ ಎಂದು ಮಾರಾಟಗಾರರು ಚಿಮ್ಮಟದಲ್ಲೇ ಎತ್ತಿ ಕೊಡುತ್ತಾರೆ. ಅದನ್ನು ಮುಟ್ಟಿದ ಕೈಯಿಂದ ಮೂಗು, ತುಟಿ, ಹಣೆಯನ್ನು ಒರೆಸಿಕೊಂಡರೂ ಬೆಂಕಿ ಬೆಂಕಿ.

ಸ್ವಾರಸ್ಯ ಏನು ಗೊತ್ತೆ? ಪಕ್ಷಿಗಳಿಗೆ ಖಾರ ತಟ್ಟುವುದೇ ಇಲ್ಲ. ಅವುಗಳ ನಾಲಗೆಯಲ್ಲಿ ಖಾರವನ್ನು ಗ್ರಹಿಸುವ ಗ್ರಂಥಿಗಳೇ ಇಲ್ಲ. ಖಾರದ ಸಂವೇದನೆ ಏನಿದ್ದರೂ ಹಸು, ಜಿಂಕೆ, ಕೋತಿ, ಮನುಷ್ಯರಂಥ ಸ್ತನಿ ಜೀವಿಗಳಲ್ಲಿ ಮಾತ್ರ ಇರುತ್ತದೆ.

ಖಾರಗಳಲ್ಲಿ ವಿವಿಧ ಉಗ್ರತೆ ಇರುವ ಹಾಗೆ ಸಿಹಿಯಲ್ಲೂ ವಿವಿಧ ಹಂತಗಳ ಸಿಹಿ ಇದೆ. ಅದನ್ನು ಇನ್ನೊಮ್ಮೆ ಚರ್ಚಿಸೋಣ. ಅಂದಹಾಗೆ, ನಮ್ಮ ನಾಲಗೆ ಆರು ಬಗೆಯ 'ರುಚಿ'ಗಳನ್ನು ಗ್ರಹಿಸುತ್ತದೆ. ಅದಕ್ಕೆ ಷಡ್ರಸಗಳು ಎನ್ನುತ್ತಾರೆ. ಎರಡನ್ನು ಇಲ್ಲಿ ಪ್ರಸ್ತಾಪಿಸಿದೆವು. ಇನ್ನು ನಾಲ್ಕು ಯಾವವು ಹೇಳಬಲ್ಲಿರಾ?

### ವಿಜ್ಞಾನ ರಸಪ್ರಶ್ನೆ:

ಇಲ್ಲಿ ಕೊಟ್ಟ ಸಮೀಕರಣವನ್ನು ನೋಡಿ. ಮಧ್ಯೆಯ ಚಿಹ್ನೆಗಳೆಲ್ಲ ಬಿಟ್ಟು ಹೋಗಿವೆ. ಕೊನೆಗೆ = 48 ಮಾತ್ರ ಉಳಿದಿದೆ. ಈಗ ನೀವೇ ಆ ಖಾಲಿ ಬಾಕ್ಸ್‌ಗಳಲ್ಲಿ ಸರಿಯಾದ ಗಣಿತ ಚಿಹ್ನೆಗಳನ್ನು (ಕೂಡು, ಕಳೆ, ಗುಣಿಸು ಅಥವಾ ಭಾಗಿಸು ಈ ನಾಲ್ಕರಲ್ಲಿ ಸೂಕ್ತವಾದುದನ್ನು) ಹೆಕ್ಕಿ ಇಲ್ಲಿ ಸೇರಿಸಿರಿ. ಕೊನೆಯಲ್ಲಿ ಸಮೀಕರಣ ಸರಿಯಾಗಿ ಇರಬೇಕು. ಅಂದರೆ ಉತ್ತರ = 48 ಬರಬೇಕು. ಪ್ರಯತ್ನಿಸಿ. ಏಕಾಗ್ರತೆ ಇದ್ದರೆ ತೀರಾ ಸುಲಭ.

$$2\square 1\square 6\square 6 = 48$$

$+ \quad - \quad \times \quad \div$




ಕಳೆದ ಸಂಚಿಕೆಯಲ್ಲಿ ಒಂದು ವಿಶಿಷ್ಟವಾದ ಮಾಯಾಚೌಕವನ್ನು ಕೊಟ್ಟಿದ್ದೆವು. ನಾಲ್ಕು ಅಡ್ಡಸಾಲು, ನಾಲ್ಕು ಕಂಬಸಾಲುಗಳ ಆ ಚೌಕವನ್ನು ತಲೆಕೆಳಗೆ ಹಿಡಿದರೂ ಮೂಲೆಯಿಂದ ಮೂಲೆಗೆ ಕೂಡಿದರೂ ಅಥವಾ ಹಿಂಬದಿಯಿಂದ ನೋಡಿದರೂ ಅದು ಮಾಯಾಚೌಕವಾಗಿಯೇ ಕಾಣುತ್ತಿತ್ತು. ಅದೇ ರೀತಿ ನೀವು ಒಂದು ಸರಳವಾದ, 3 ಅಡ್ಡ ಸಾಲು, 3 ಲಂಬ ಸಾಲುಗಳ ಚೌಕವನ್ನು ರಚಿಸಲು ಸಾಧ್ಯವೋ ಎಂದು ಕೇಳಿದ್ದೆವು. ಇಲ್ಲಿದೆ ನೋಡಿ ಅಂಥದ್ದೊಂದು ಉದಾಹರಣೆ. ಅಡ್ಡ, ಉದ್ದ, ಮೂಲೆಯಿಂದ ಮೂಲೆಯ ಅಂಕೆಗಳನ್ನು ಕೂಡಿದರೂ ಅದೇ ಮೊತ್ತ ಬರುತ್ತದೆ. ಎಲ್ಲ ಅಂಕಿಗಳೂ ಒಂದೊಂದೇ ಬಾರಿ ಬಂದಿವೆ. ನೀವು ಬೇರೆ ಅಂಕಿಗಳಿಂದ ಇಂಥ ಚೌಕವನ್ನು ಸೃಷ್ಟಿಸಲು ಯತ್ನಿಸಬಹುದು.

## ಅದಮ್ಯ ಚೇತನ

BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನ ಸಂಸ್ಥೆಯಿಂದ ದಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತವಾಗುವ ಗೋಡೆಪತ್ರಿಕೆ 'ಅದಮ್ಯ ಚೇತನ'.

© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ

ಸಂಪಾದಕರು: ನಾಗೇಶ ಹೆಗಡೆ    ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/

ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/